# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 320 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19/07/2024 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಪ್ರಸ್ತುತ ಸಂಗ್ರಹವಾಗಿರುವ ಸೆಸ್ ಹಣವೆಷ್ಟು | 2007 ರಿಂದ 30-06-2024 ರವರೆಗೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಿಂದ ಶೇ.1 ರಂತೆ ರೂ.11,625.71 ಕೋಟಿಗಳಷ್ಟು ಸುಂಕ ಹಣ ಸಂಗ್ರಹವಾಗಿರುತ್ತದೆ. |
| ಆ) | ಕಳೆದ ಮೂರು ವರ್ಷದಿಂದ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಧನ ಸಹಾಯದ ರೂಪದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. | ಕಳೆದ ಮೂರು ವರ್ಷಗಳಲ್ಲಿ ಕಾರ್ಮಿಕರ ಮಕ್ಕಳಿಗೆ ವಿತರಿಸಿದ ಶೈಕ್ಷಣಿಕ ಧನಸಹಾಯದ ವಿವರ: (see table below) |
| ಇ) | ಬಡವರ್ಗದ ವಿದ್ಯಾರ್ಥಿನಿಯರ ಶೈಕ್ಷಣಿಕ ಧನಸಹಾಯಕ್ಕಾಗಿ ಕಳೆದ 4 ವರ್ಷದಿಂದ ಎಷ್ಟು ಅರ್ಜಿಗಳು ಇಲಾಖೆಗೆ ಸ್ವೀಕೃತಗೊಂಡಿದೆ: ಇದರಲ್ಲಿ. ಎಷ್ಟು ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡಲಾಗಿದೆ. | ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಂದ ಶೈಕ್ಷಣಿಕ ಧನಸಹಾಯಕ್ಕಾಗಿ ಕಳೆದ 4 ವರ್ಷದಲ್ಲಿ ಸ್ವೀಕೃತವಾದ ಮತ್ತು ಮಂಜೂರು ಮಾಡಿದ ಅರ್ಜಿಗಳ ವಿವರ ಈ ಕೆಳಕಂಡಂತಿದೆ: (see table below) |

ಆ) ಶೈಕ್ಷಣಿಕ ಧನಸಹಾಯದ ವಿವರ:

| ಕ್ರ. ಸಂ | ವರ್ಷ | ಶೈಕ್ಷಣಿಕ ಧನಸಹಾಯಕ್ಕಾಗಿ ಮೀಸಲಿರಿಸಿದ ಮೊತ್ತ (ರೂ. ಕೋಟಿಗಳಲ್ಲಿ) | ಬಿಡುಗಡೆಯಾದ ಸಹಾಯ ಧನದ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|---|
| 1 | 2021-22 | 100.00 | 669.25 |
| 2 | 2022-23 | 400.00 | 249.00 |
| 3 | 2023-24 | 500.00 | ಈ ಸಾಲಿನ ಶೈಕ್ಷಣಿಕ ಧನಸಹಾಯಕ್ಕಾಗಿ ಅರ್ಜಿಯನ್ನು ಅಹ್ವಾನಿಸಲಾಗುತ್ತಿದ್ದು, ಮೊತ್ತವು ಬಿಡುಗಡೆಯಾಗಿರುವುದಿಲ್ಲ. |

ಇ) ಅರ್ಜಿಗಳ ವಿವರ:

| ಕ್ರ. ಸಂ. | ವರ್ಷ | ಸ್ವೀಕರಿಸಲಾದ ಅರ್ಜಿಗಳು | ಮಂಜೂರಾದ ಅರ್ಜಿಗಳು |
|---|---|---|---|
| 1 | 2020-21 | 1,85,837 | 1,25,403 |
| 2 | 2021-22 | 6,42,155 | 1,15,538 |
| 3 | 2022-23 | 11,13,933 | 9,61,930 |
| 4 | 2023-24 | ಅರ್ಜಿಯನ್ನು ಸ್ವೀಕರಿಸಲಾಗುತ್ತಿದೆ | |

| | | |
|---|---|---|
| ಈ) | ಮಂಡಳಿಗೆ ಕಾರ್ಮಿಕರ ಶ್ರಮದಿಂದ ಸಂಗ್ರಹವಾಗಿರುವ ಹಾಗೂ ಪ್ರಸ್ತುತ 8.200 ರೂಪಾಯಿ ಉಳಿಕೆ ಇರುವುದು ನಿಜವೇ; ಹಾಗಿದ್ದಲ್ಲಿ, ಸಕಾಲದಲ್ಲಿ ಶೈಕ್ಷಣಿಕ ಧನಸಹಾಯ ಹಣ ಬಿಡುಗಡೆ ಮಾಡದಿರಲು ಸರ್ಕಾರಕ್ಕೆ ಇರುವ ತೊಂದರೆಗಳೇನು? | ಮಂಡಳಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಿಂದ ಶೇ. 1 ರಷ್ಟು ಸಂಗ್ರಹವಾದ ಸುಂಕ ಮೊತ್ತದಿಂದ ಪ್ರಸ್ತುತ ರೂ. 7547.23 ಕೋಟಿಗಳಷ್ಟು (ಸುಂಕ) ಮತ್ತು ಬಡ್ಡಿ ಸೇರಿ ಉಳಿಕೆಯಾಗಿರುತ್ತದೆ.<br><br>ಮಂಡಳಿಯು 2023-24ನೇ ಸಾಲಿನಲ್ಲಿ ಇ-ಆಡಳಿತ ಇಲಾಖೆಯ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ (ಎಸ್. ಎಸ್. ಪಿ) ಮೂಲಕ ಶೈಕ್ಷಣಿಕ ಧನಸಹಾಯಕ್ಕಾಗಿ ಅರ್ಜಿಯನ್ನು ಆಹ್ವಾನಿಸಿದ್ದು, ಎಲ್ಲಾ ಫಲಾನುಭವಿಗಳಿಗೆ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಕೊನೆಯ ದಿನಾಂಕವನ್ನು 31-07-2024 ರವರೆಗೆ ವಿಸ್ತರಿಸಲಾಗಿರುತ್ತದೆ. ತದನಂತರ ಅರ್ಜಿಗಳನ್ನು ಪರಿಶೀಲಿಸಿ ಶೈಕ್ಷಣಿಕ ಧನಸಹಾಯವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.<br><br>2024-25ನೇ ಸಾಲಿನಲ್ಲಿ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ (ಎಸ್. ಎಸ್. ಪಿ) ಮೂಲಕ ಎಲ್ಲಾ ಇಲಾಖೆಗಳ ಶೈಕ್ಷಣಿಕ ಧನಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುವ ಸಮಯದಲ್ಲೇ ಮಂಡಳಿಯು ಕೂಡ ನೋಂದಾಯಿತ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು |

**ಕಾಇ 289 ಎಲ್ ಇಟಿ 2024**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**